ಆತನ ಬಳಿ ಇನ್ನೊಂದು ಫೋನು ಇರುವುದು ಕೋಣೆಯಲ್ಲಿ ಸಿಕ್ಕಿದ ಬಿಲ್ಲು ನೋಡಿ ತಿಳಿದೆ. ಆ ಫೋನೂ ಒಮ್ಮೊಮ್ಮೆ ಮಾತ್ರ ಸಂಪರ್ಕಕ್ಕೆ ಸಿಗುತ್ತಿತ್ತು. ನಾನು ಆ ಚರವಾಣಿಗೆ ಒಂದು ಸಂದೇಶ ಕಳಿಸಿದ್ದೇನೆ... 'ಬಾವಲಿ ಹಾರಿಹೋಗಿದೆ' ಅಂತ. ಬಾವಲಿಗಳಿದ್ದ ಮರದಡಿಯಲ್ಲಿ ವಜ್ರ ಇಟ್ಟಿದ್ದನಲ್ಲವೇ. ಆತನಿಗೆ ವಜ್ರ ಕಾಣೆಯಾಗಿದೆ ಅಂತ ಅರ್ಥವಾಗುತ್ತೆ ಅಂತ ಭಾವಿಸ್ತೀನಿ. ಎರಡು ದಿನ ರಾತ್ರಿ ಕಾದೆ. ಬರಲಿಲ್ಲ. ಇವತ್ತು ಹೋಗಿ ಕಾಯೋಣ. ಆತ ಬಂದೇ ಬರುತ್ತಾನೆ."

"ಪತ್ತೇದಾರರೆ, ಒಂದು ಸಂದೇಹ. ಸೋಮಯ್ಯ ಕಾಲಿಯಾನಿಗೆ ಸಹಾಯ ಮಾಡಿದ್ರೂ ನಿಮ್ಮ ಬಳಿ ಏಕೆ ಬಂದ?"

"ನಾನು ಮೋಹಿತನ ಸುಳಿವು ನೀಡಿ ಬಹುಮಾನ ಪಡೆದೆ. ಆಮೇಲೆ ಕಾಲಿಯಾ ನನ್ನನ್ನು ಸಂಪರ್ಕಿಸಿದ. ಆತನಿಗೆ ವರ್ಷಿಣಿಯನ್ನು ಭೇಟಿಯಾಗುವಂತೆ ಹೇಳ್ದೆ. ಮೋಹಿತ ಆಮೇಲೆ ಆತನನ್ನು ಸಾಗ ಹಾಕಿದ. ಅಲ್ಲಿಗೆ ಪ್ರಕರಣ ಮುಗಿಯಿತು ಎಂದೇ ಭಾವಿಸ್ದೆ. ಈ ಬಾರಿ ವರ್ಷಿಣಿಯೇ ಏನೋ ಮಾಡಿರಬೇಕೆಂದು ಅಂದುಕೊಂಡಿದ್ದೆ."

ಸೋಮಯ್ಯ ಸಮಜಾಯಿಷಿ ನೀಡಿದ.

ಕರಮಚಂದನ ಊಹೆ ಹುಸಿಯಾಗಲಿಲ್ಲ. ಆ ರಾತ್ರಿಯೇ ಸುಮಾರು ಎರಡು ಗಂಟೆಯ ಹೊತ್ತಿಗೆ ಮೋಹಿತ್ ಆ ಮರದ ಬಳಿಗೆ ಬಂದ. ಡಿಸೋಜ ತಕ್ಷಣ ಆತನನ್ನು ಬಂಧಿಸಿದ. ವಜ್ರವನ್ನು ಕರಮಚಂದ ಪೊಲೀಸರಿಗೊಪ್ಪಿಸಿದ. ನಂತರ ಮೋಹಿತನನ್ನು ಗುಜರಾತಿನ ಪೊಲೀಸರ ವಶಕ್ಕೊಪ್ಪಿಸಲಾಯ್ತು. ಬದ್ರಿಯನ್ನು ಬಂಧಿಸಲಾಯ್ತು. ಸೋಮಯ್ಯ ಮತ್ತು ವರ್ಷಿಣಿ ನೇರವಾಗಿ ಅಪರಾಧದಲ್ಲಿ ಷಾಮೀಲಾಗದ್ದರಿಂದ ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ.


## ರವಿರಾಜ ಬೈಕಂಪಾಡಿ

1987 ರಲ್ಲಿ ಸಿ.ಎ ಅಂತಿಮ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಮೂವತ್ತಾರನೇ ರ್‍ಯಾಂಕ್‌ನೊಂದಿಗೆ ಉತ್ತೀರ್ಣರಾದ ಬಳಿಕ ಮಂಗಳೂರಿನಲ್ಲಿ ಇಪ್ಪತ್ತೆಂಟು ವರ್ಷಗಳಿಂದ ಚಾರ್ಟರ್ಡ್ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಪತ್ತೇದಾರಿ ಕತೆ, ಜೊತೆಗೆ ಚುಟುಕು ರಚನೆ ಅವರ ಹವ್ಯಾಸಗಳು. ಅವರ ಮೊದಲ ಪತ್ತೇದಾರಿ ಕತೆ 'ಭವಿಷ್ಯ' 'ಸುಧಾ' ವಾರಪತ್ರಿಕೆಯಲ್ಲಿ 1983 ರಲ್ಲಿ ಪ್ರಕಟವಾಯಿತು. ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಅನೇಕ ಕತೆಗಳು ಪ್ರಕಟಣೆಗೊಂಡಿವೆ. ಪ್ರಥಮ ಪತ್ತೇದಾರಿ ಕಿರು ಕಾದಂಬರಿ 'ಅದಲು ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಒಂದೆರಡು ನೀಳ್ಗತೆಗಳೂ ಬೆಳಕು ಕಂಡಿವೆ. ಇದುವರೆಗೆ ಸುಮಾರು ನಲವತ್ತಕ್ಕೂ ಹೆಚ್ಚು ಕತೆಗನ್ನು ಪ್ರಕಟಿಸಿದ್ದಾರೆ. ಅವರ ಮೆಚ್ಚಿನ ಲೇಖಕ ಟಿ.ಕೆ. ರಾಮರಾವ್. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.